| | | | | | | | |
|---|---|---|---|---|---|---|---|
| **37** | **Nirani** | 2580 | - | - | - | - | - |
| **38** | **Prabhull geshwara** | 131190 | 1312 | 692 | 620 | 1074 | 1694 |
| **39** | **Renuka** | 295800 | 963 | - | 963 | - | 963 |
| **40** | **S.C.M** | 96330 | 915 | 589 | 326 | - | 326 |
| **41** | **Shamnur** | 135070 | 912 | 380 | 532 | - | 532 |
| **42** | **Sirguppa(G)** | - | - | - | - | 423 | 423 |
| **43** | **Siraguppa(D)** | - | - | - | - | - | - |
| **44** | **Sundari** | - | - | - | - | - | - |
| **45** | **Ugar** | 746043 | 9066 | 7709 | 1357 | 13 | 1370 |
| **46** | **Venateshwar** | 205485 | 2054 | 959 | 1095 | 1769 | 2864 |
| | **Sub-Total-IV** | **3206298** | **30126** | **19209** | **10917** | **486** | **415781** |
| | **Grand Total :** | 5354873 | 51617 | 33172 | 18445 | 12342 | 30787 |

403(1098) : ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ(ಬಿಜಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರದಲ್ಲಿ ಪರಿಶಿಷ್ಟ ಜಾತಿ(ಎಸ್.ಸಿ) ವಿದ್ಯಾರ್ಥಿಗಳಿರುವ ಸರ್ಕಾರಿ ಮೆಟ್ರಿಕ್ ಪೂರ್ವ ವಸತಿ ನಿಲಯಗಳ ಸಂಖ್ಯೆ ಎಷ್ಟು ;

ಆ) ಹೊಸದಾಗಿ ವಸತಿ ನಿಲಯಗಳನ್ನು ಪ್ರಾರಂಭಿಸುವ ಅಗತ್ಯತೆ ಸರ್ಕಾರದ ಗಮನದಲ್ಲಿದೆಯೇ;

ಇ) ಹಾಗಿದ್ದಲ್ಲಿ. ಮೆಟ್ರಿಕ್ ಪೂರ್ವ ವಸತಿ ನಿಲಯವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಡಾ: ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 54 ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿವೆ.

ಆ) ಹೌದು.

ಇ) ಅನುದಾನದ ಲಭ್ಯತೆಗೊಳಪಟ್ಟ ಹೊಸ ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ತೆರೆಯುವ ಬಗ್ಗೆ ಪರಿಶೀಲಿಸಲಾಗುವುದು.

404(1099) : ಶ್ರೀ ಅಪ್ಪ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಧಾನ ಸಭಾ ಮತಕ್ಷೇತ್ರಕ್ಕೊಂದು ಕಸ್ತೂರಿ ಬಾಲಕಿಯರ ವಸತಿ ಪ್ರೌಢಶಾಲೆ ಮಂಜೂರಾತಿ ನೀಡುವ ಬಗ್ಗೆ ಸರ್ಕಾರ ಗಮನಹರಿಸಿದೆಯೇ ;

ಆ) ಹಾಗಿದ್ದಲ್ಲಿ, ಈ ವಸತಿ ಪ್ರೌಢ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಆರ್. ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಗ್ರಾಮೀಣ ಮಹಿಳೆಯರ ಸಾಕ್ಷರತೆ ಪ್ರಮಾಣ ರಾಷ್ಟ್ರೀಯ ಸರಾಸರಿ 46.13% ಕ್ಕಿಂತ ಕಡಿಮೆ ಇರುವ ಮತ್ತು ಮಹಿಳೆ ಹಾಗೂ ಪುರುಷ ಸಾಕ್ಷರತೆಯಲ್ಲಿನ ಅಂತರವು ರಾಷ್ಟ್ರೀಯ ಸರಾಸರಿ

21.59% ಕ್ಕಿಂತ ಹೆಚ್ಚಾಗಿರುವ ರಾಜ್ಯದ 58 ತಾಲ್ಲೂಕುಗಳನ್ನು ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳೆಂದು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ನೀಡಿದ್ದ ಮಾರ್ಗಸೂಚಿಯಂತೆ ಗುರುತಿಸಲಾಗಿದ್ದು, ಈ ಎಲ್ಲಾ 58 ತಾಲ್ಲೂಕುಗಳಲ್ಲಿ ತಲಾ ಒಂದರಂತೆ ಕಸ್ತೂರಿ ಬಾ ಬಾಲಿಕಾ ವಸತಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ. ವಿವರವನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ. ಎಲ್ಲಾ ವಿಧಾನ ಸಭಾ ಮತಕ್ಷೇತ್ರಗಳಿಗೆ ತಲಾ ಒಂದು ಕಸ್ತೂರಿ ಬಾ ಗಾಂಧಿ ಬಾಲಿಕಾ ವಿದ್ಯಾಲಯಗಳಿಗೆ ಮಂಜೂರಾತಿ ನೀಡಲು ಮಾರ್ಗಸೂಚಿಯಂತೆ ಸಾಧ್ಯವಿರುವುದಿಲ್ಲ.

ಆ). ಈ 58 ವಸತಿ ಶಾಲೆಗಳು ಹಿರಿಯ ಪ್ರಾಥಮಿಕ ಶಾಲೆಗಳಾಗಿದ್ದು, ಇವುಗಳನ್ನು 2004–05ನೇ ಸಾಲಿನಿಂದಲೇ ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ವತಿಯಿಂದ ಅನುದಾನ ಬಿಡುಗಡೆಯಾದ ನಂತರ ಪ್ರಾರಂಭಿಸಲಾಗುವುದು.

ಅನುಬಂಧ

**SARVASHIKSHA ABHIYAN-KARNATAKA**

ವಿಧಾನ ಸಭೆಯ ಸದಸ್ಯರಾದ ಸನ್ಮಾನ್ಯ ಶ್ರೀ. ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ, ಬಿಜಾಪುರ ಇವರ ಚುಕ್ಕೆ ಗುರುತಿನ ಸಂಖ್ಯೆ 1099

:ಯಃ ಬಿಜಾಪುರ ಮತಕ್ಷೇತ್ರದೊಂದು ಕಸ್ತೂರಿಬಾ ಬಾಲಕಿಯರ ವಸತಿ ಪ್ರೌಢ ಶಾಲೆ ಮಂಜೂರು

**Details of KGBV Blocks in Karnataka**

| Sl No. | District Name | Name of the approved KGBV Blocks | No of KGBVs approved | Rural Female Literacy Rate | Gender Gap |
|---|---|---|---|---|---|
| 1 | Bangalore Rural | Channapatna | 1 | 46.00 | 22.05 |
| 2 | Bidar | Basavakalyam | 1 | 44.28 | 27.31 |
| | | Humanbad | 1 | 42.74 | 25.27 |
| | | Bidar | 1 | 41.60 | 23.95 |
| 3 | Bijapur | Muddebihal | 1 | 36.56 | 35.62 |
| | | Sindhagi | 1 | 35.74 | 30.14 |
| | | Basavana Bagewadi | 1 | 39.43 | 28.60 |
| | | Bijapur | 1 | 38.22 | 25.80 |
| 4 | Koppal | Kushtagi | 1 | 32.02 | 34.35 |
| | | Koppal | 1 | 39.56 | 29.64 |
| | | Yelburga | 1 | 40.59 | 28.75 |
| | | Gangavathi | 1 | 35.84 | 27.82 |

| | | | | | |
|---|---|---|---|---|---|
| 5 | Bagalkot | Hungund | 1 | 38.03 | 35.98 |
| | | Bagalkot | 1 | 37.79 | 32.98 |
| | | Badami | 1 | 34.41 | 32.62 |
| | | Biligi | 1 | 35.66 | 28.18 |
| | | Mudhol | 1 | 38.29 | 25.04 |
| | | Jamakhandi | 1 | 37.50 | 22.44 |
| 6 | Bellary | Bellary | 1 | 31.48 | 28.25 |
| | | Siraguppa | 1 | 26.91 | 28.08 |
| | | Sandur | 1 | 35.32 | 26.67 |
| | | Kudlgi | 1 | 44.84 | 26.30 |
| | | H B Halli | 1 | 45.74 | 25.50 |
| | | Hospet | 1 | 34.69 | 24.96 |
| 7 | Davanagere | Harpanahalli | 1 | 42.02 | 22.21 |
| 8 | Dharwad | Kalgattgi | 1 | 44.40 | 23.03 |
| | Dharwad | Dharwad | 1 | 45.00 | 23.71 |
| 9 | Gulbarga | Jewargi | 1 | 27.86 | 28.82 |
| | | Chincholi | 1 | 33.69 | 28.36 |
| | | Aland | 1 | 38.33 | 27.93 |
| | | Gulbarga | 1 | 47.00 | 27.04 |
| | | Afzalpur | 1 | 36.35 | 27.02 |
| | | Shorapur | 1 | 26.98 | 26.79 |
| | | Chittapur | 1 | 29.03 | 23.63 |
| | | Sedam | 1 | 27.09 | 23.75 |
| | | Shahapur | 1 | 23.01 | 22.98 |
| 10 | Raichur | Lingasagur | 1 | 30.25 | 31.56 |
| | | Sindhanur | 1 | 34.99 | 28.65 |
| | | Raichur | 1 | 24.79 | 26.98 |
| | | Deodurga | 1 | 25.22 | 25.43 |
| | | Manvi | 1 | 28.01 | 24.08 |
| 11 | Belgaum | Ramdurga | 1 | 36.08 | 30.23 |
| | | Saundatti | 1 | 39.91 | 29.3 |
| | | Gokak | 1 | 37.05 | 27.71 |
| | | Raibag | 1 | 42.00 | 22.48 |

143-22

| | | | | | |
|---|---|---|---|---|---|
| 12 | Chitradurga | Molkaimur | 1 | 37.13 | 25.85 |
| | | Challakere | 1 | 43.02 | 22.28 |
| 13 | Gadag | Ron | 1 | 45.04 | 33.24 |
| | | Mundargi | 1 | 44.47 | 29.98 |
| 14 | Hassan | Holenarasipura | 1 | 43.84 | 25.08 |
| 15 | Kolar | Gudibande | 1 | 38.54 | 25.36 |
| | | Mulbagilu | 1 | 44.39 | 25.23 |
| | | Srinivasapur | 1 | 46.12 | 25.16 |
| | | Bhagepalli | 1 | 45.06 | 23.2 |
| | | Bangarpet | 1 | 35.01 | 24.36 |
| | | Chintamani | 1 | 43.04 | 23.54 |
| 16 | Tumkur | Pavagada | 1 | 41.49 | 25.68 |
| 17 | Mysore | Krishnarajanagar | 1 | 45.01 | 22.93 |

58

405(1100) : ಶ್ರೀ ಅಪ್ಪಸಾಹೇಬ್ (ಅಪ್ಪ) ಮಲ್ಲಪ್ಪ ಪಟ್ಟಣ ಶೆಟ್ಟಿ(ಬಿಜಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಶಿಷ್ಟ ವರ್ಗದ (ಎಸ್.ಟಿ) ವಿದ್ಯಾರ್ಥಿಗಳ ಸಲುವಾಗಿ ಆಶ್ರಮ ಶಾಲೆ ಪ್ರಾರಂಭಿಸುವ ಅಗತ್ಯತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಆಶ್ರಮ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಡಾ: ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ಆ) ಮುಂಬರುವ ವರ್ಷಗಳಲ್ಲಿ ಅನುದಾನದ ಲಭ್ಯತೆ ಹಾಗೂ ಅಗತ್ಯತೆಯನ್ನು ಪರಿಗಣಿಸಿ ಮಂಜೂರಾತಿ ನೀಡಲು ಕ್ರಮ ವಹಿಸಲಾಗುವುದು.

406(1124) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಆಹಾರ ಸಂಸ್ಕರಣಾ ಘಟಕಗಳೆಷ್ಟು ಘಟಕಗಳ ಹೆಸರು, ಊರು, ಹೂಡಿದ ಬಂಡವಾಳ ಸಂಸ್ಕರಣೆ ಮಾಡುತ್ತಿರುವ ಉತ್ಪನ್ನ, ವಾರ್ಷಿಕ ವಹಿವಾಟು, ರಫ್ತು ಇತ್ಯಾದಿ ಬಗ್ಗೆ ವಿವರ ನೀಡುವುದು ;

ಆ) ಇತ್ತೀಚಿನ ದಿನಗಳಲ್ಲಿ ಈ ಉದ್ಯಮ ಜಾಗತೀಕರಣ ಮಟ್ಟದಲ್ಲಿ ಆಗಾಧವಾಗಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಬಂದಿದ್ದಲ್ಲಿ, ಈ ಘಟಕಗಳನ್ನು ಆಕರ್ಷಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು;

ಈ) ಹಿಂದಿನ ರಾಜ್ಯ ಸರ್ಕಾರ 2003–2004ರ ಆಯವ್ಯಯದಲ್ಲಿ ಘೋಷಿಸಿದಂತೆ "ಆಹಾರ ಕರ್ನಾಟಕ ಲಿಮಿಟೆಡ್" ಎಂಬ ಕಂಪನಿಯನ್ನು ಸ್ಥಾಪಿಸಿದೆಯೇ :